## ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಇವರ ಪರಿಶ್ರಮಕ್ಕೆ ದೊರೆತ ಪ್ರಶಸ್ತಿಗಳು



1. 2013–14 "ಶ್ರೇಷ್ಠ ಕೃಷಿಕ ಮಹಿಳೆ"
   ಪ್ರಶಸ್ತಿ ಕೃಷಿ ವಿಶ್ವವಿದ್ಯಾಲಯ ರಾಯಚೂರು
2. 2014–15 "ಗೋಲ್ಡ್ ಅವಾರ್ಡ"
   ಇಕ್ರೀ ಸಾಟ್ ಹೈದಾರಬಾದ್
3. 2015–16 "ಕಿಸಾನ್ ಜ್ಯೋತಿ ಅವಾರ್ಡ"
   ಶಿವಶಕ್ತಿ ಪೀಠ ಇಲ್ಲಕಲ್ ಮಠ
4. 2015–16 "ಬೆಸ್ಟ್ ಪರ್‌ಫಾರ್‌ಮೇನ್ಸ್ ಇನ್ ಅಗ್ರೀಕಲ್ಚರ್"
   ಕೊತ್ತಲ ಬಸವೇಶ್ವರ ಭಾರತಿಯ ಶಿಕ್ಷಣ ಸಂಸ್ಥೆ
5. "ಬೆಸ್ಟ್ ಹಾರ್ಟಿಕಲ್ಚರ್ ಫಾರ್ಮರ್ ಅವಾರ್ಡ"
   ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟೆ.
6. 2016–17 "ಶ್ರೇಷ್ಠ ಕೃಷಿಕ ಮಹಿಳೆ"
   ಪ್ರಶಸ್ತಿ ದ್ವಿಗ್ ವಿಜಯ ಟಿವಿ ಚನಲ್
7. 2017–18 "ರಾಷ್ಟ್ರೀಯ ಇನ್ನೋವಿಟಿವ್ ಫಾರಂರ್ ಅವಾರ್ಡ"
   ಮಿನಿಸ್ಟರಿ ಆಫ್ ಅಗ್ರೀಕಲ್ಚರ್, ನ್ಯೂ ದೆಹಲಿ.
8. 2017–18 " ಚಂದನ"
   ಪ್ರಶಸ್ತಿ ಟಿವಿ ಚನಲ್ ಚಂದನ

ಪಬ್ಲಿಕ್ ಟಿವಿಯಲ್ಲಿ "ಪಬ್ಲಿಕ್ ಹೀರೊ" ಕಾರ್ಯಕ್ರಮದಲ್ಲಿ ಸಂದರ್ಶನ ಹಾಗೂ ರಾಯಚೂರು ರೇಡಿಯೋ ರೈತರ ಕಾರ್ಯಕ್ರಮದಲ್ಲಿ ಸಂದರ್ಶನ ಕಾರ್ಯಕ್ರಮ ಪ್ರಸಾರ.

ಇವರ ಯಶಸ್ಸಿಗೆ ಕಠಿಣ ಪರಿಶ್ರಮ ಹಾಗೂ ಕುಟುಂಬದ ಬೆಂಬಲ ಹಾಗೂ ಇತರ ಪ್ರಗತಿಪರ ರೈತರ ಪ್ರೇರಣೆಯೆ ಯಶಸ್ಸಿಗೆ ಕಾರಣ ಎಂಬುವುದು ಅವರ ಅಭಿಪ್ರಾಯ



ಕೃಷಿ ಇಲಾಖೆ
ರಾಯಚೂರು

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್
ರಾಯಚೂರು

# ಯಶೋಗಾಥೆ

## ಸಾಧನೆಗೆ ಅಡ್ಡಿ ಬಾರದ ಪದವಿ

### ಕೃಷಿಯಿಂದ ಹಸನಾದ ಬದುಕು

-ಶ್ರೀಮತಿ ಕವಿತಾ ಉಮಾಶಂಕರ್ ಮಿತ್ರಾ
MA in Psychology
ಕವಿತಾಳ ತಾ॥ ಮಾನವಿ ಜಿ॥ ರಾಯಚೂರು



# ಯಶೋಗಾಥೆ

## ಕವಿತಾಳದ ಕವಿತಾ ಮಿಶ್ರಾ

ಹುಟ್ಟಿದಾಗಿನಿಂದಲೂ ಪ್ರಕೃತಿ ಎಂದರೆ ಅಪಾರ ಪ್ರೀತಿ. ಕೃಷಿಯೇ ನನ್ನ ಜೀವಾಳ ಗಿಡನೆಟ್ಟು ಅವುಗಳ ಪೋಷಣೆ ಮಾಡುವುದೇಂದರೆ ಒಂದು ತರಹದ ಖುಷಿ. ಎಂಬುವುದು ಶ್ರೀಮತಿ ಕವಿತಾ ಮಿಶ್ರಾರವರ ಮನದಾಳದ ಮಾತು. ಇವರು ಓದಿದ್ದು, ಕಂಪ್ಯೂಟರ್ ಡಿಪ್ಲೋಮಾ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಆದರೆ ಜೀವನ ರೂಪಿಸಿಕೊಂಡಿರುವುದು ಸಾವಯವ ಕೃಷಿಯಲ್ಲಿ. ಕವಿತಾಳ ಎಂಬ ಪುಟ್ಟ ಗ್ರಾಮದ ಸರ್ವೆ ನಂ: 23ರಲ್ಲಿ, 08 ಎಕರೆ ಜಮೀನಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಅತೀ ಸಾಂದ್ರತೆ **(High Density Planting)** ಪದ್ಧತಿಯಲ್ಲಿ ಸಾವಯವ ಹಾಗೂ ನೈಸರ್ಗಿಕ ಕೃಷಿ ಅಳವಡಿಸುವ ಮೂಲಕ ಒಬ್ಬ ಯಶಸ್ಸನ್ನು ಕೊಂಡಂತಹ ಒಬ್ಬ ಪ್ರಗತಿಪರ ರೈತರ ಯಶೋಗಾದೆ ಇದಾಗಿದೆ. ಇವರ ಯಶಸ್ಸಿಗೆ ಪ್ರೇರಣೆಯಾಗಿದ್ದು ಶ್ರೀ ಅಶೋಕ ಪಾಳೇಕಾರ್, ನೈಸರ್ಗಿಕ ಕೃಷಿಕರು ಹಾಗೂ ಸಾಲುಮರದ ತಿಮ್ಮಕ್ಕ, ಹಾಗು ಅವರ ಪತಿಯ ಸಹಕಾರ ಹಾಗೂ ಪ್ರೋತ್ಸಾಹದಿಂದ ತೋಟದಲ್ಲಿಯೇ ಮನೆ ಕಟ್ಟಿಕೊಂಡು ಕೃಷಿಯಲ್ಲೇಯೇ ಬದುಕು ಕಂಡುಕೊಂಡವರು.

ಇವರು 08 ಎಕರೆ ಜಮೀನಿನಲ್ಲಿ ತೋಟಗಾರಿಕೆ ಬೆಳೆಗಳಾದ ಮಾವು-225, ನಿಂಬೆ-53, ದಾಳಿಂಬೆ-2400, ಮೋಸಂಬಿ-480, ಬೆಟ್ಟದ ನೆಲ್ಲಿ-150, ಸೀತಾಫಲ-850, ನುಗ್ಗೆಕಾಯಿ ಗಿಡ-150, ಪೇರಲ ಗಿಡ-150, ಜಂಬು ನೇರಳೆ-20, ತೆಂಗು-65, ಶ್ರೀಗಂಧ-1400, ತೇಗ-1050, ಸಪೋಟಾ-20, ಮಲ್ಲಿಗೆ-500 ಗಿಡಗಳನ್ನು ತೋಟದಲ್ಲಿ ಬೆಳೆದಿರುತ್ತಾರೆ. ಅವರ ಪ್ರಕಾರ ರೈತರು ಒಂದಿಲ್ಲ ಇನ್ನೊಂದು ಬೆಳೆಯಿಂದ ಪ್ರತಿ ತಿಂಗಳು ಆದಾಯಬರುವ ಹಾಗೆ ಯೋಜನೆಯನ್ನು ರೂಪಿಸುವುದು ಅವಶ್ಯಕತೆಯನ್ನುವುದು ಅವರ ಅಭಿಪ್ರಾಯ ಒಂದು ಬೆಳೆಯನ್ನು ಬೆಳೆಯುವ ಬದಲು ವಿವಿಧ ಬೆಳೆಗಳನ್ನು, ಬೆಳೆ ಪರಿವರ್ತನೆಯನ್ನು ಸಮಗ್ರ ಕೃಷಿ ಅಳವಡಿಸುವ ಮೂಲಕ ರೈತರು ಹೆಚ್ಚಿನ ಆದಾಯ ಮತ್ತು ನೆಮ್ಮದಿಯ ಜೀವನ ನಡೆಸಲು ಸಾಧ್ಯವೆನ್ನುತ್ತಾರೆ. ಅವರ ತೋಟದಲ್ಲಿ 130 ಕೋಳಿಗಳು 10 ದೇಸಿ ಹಸುಗಳು 25 ಕುರಿಗಳನ್ನು ಸಾಕಿದ್ದು ಇವುಗಳ ಉತ್ಪನ್ನಗಳ ಮಾರಾಟದಿಂದ ಆದಾಯವನ್ನು ಸಹ ಪಡೆಯುತ್ತಿದ್ದಾರೆ. 8 ಎಕರೆ ಜಮೀನಿನಲ್ಲಿ ಒಂದು ಬೋರ್ ಮತ್ತು ಬಾವಿಯನ್ನು ಹೊಂದಿದ್ದು ಹನಿ ನೀರಾವರಿ ಪದ್ಧತಿ ಅಳವಡಿಸಿರುತ್ತಾರೆ. ಗೊಬ್ಬರಕ್ಕಾಗಿ ಅವರಲ್ಲೇ ಲಭ್ಯವಿರುವ ಒಣ ತಪ್ಪಲು, ಸಗಣಿ, ಗಂಜಲ, ಕುರಿ ಹಿಕ್ಕೆ, ಉಪಯೋಗಿಸಿಕೊಂಡು, ಎರೆ ಗೊಬ್ಬರ, ಕಾಂಪೋಸ್ಟ್ ಗೊಬ್ಬರ ತಯಾರಿಸಿ ಬೆಳೆಗಳಿಗೆ ಉಪಯೋಗಿಸಿತ್ತಾರೆ. ಬಯೋ ಡೈಜಸ್ಟರ್ ಮೂಲಕ ಗಿಡಗಳಿಗೆ ನೇರವಾಗಿ ಜೀವಾಅಮೃತ, ದಶಪರ್ಣಿ, ಮುಂತಾದ ದ್ರವ ರೂಪದ ಗೊಬ್ಬರಗಳನ್ನು ಹನಿ ನೀರಾವರಿ ಮೂಲಕ ಗಿಡಗಳಿಗೆ ನೀಡುತ್ತಾರೆ. ಕೀಟ ರೋಗಗಳ ಹತೋಟಿಗೆ ಜೀವ ಅಮೃತ, ದಶಪರ್ಣಿ, ಜೈವಿಕ ಕೀಟನಾಶಕಗಳನ್ನು ತಯಾರಿಸಿ ಸಿಂಪರಣೆ ಮಾಡುತ್ತಾರೆ.

ಇವರು ಶ್ರೀಗಂಧ ಸಸಿಗಳನ್ನು ಬೆಳೆಸಿ ಮಾರಾಟ ಮಾಡುವುದರ ಮೂಲಕ ಹೆಚ್ಚಿನ ಆದಾಯ ಪಡೆಯಲು ಸಾಧ್ಯವೆನ್ನುವುದು ಇವರ ಅನುಭವದ ಮಾತು ಇವರು ತಮ್ಮ ತೋಟದಲ್ಲಿ ಶ್ರೀಗಂಧದ ಸಸಿಗಳನ್ನು ಬೆಳೆಸಿ ಗುಜರಾತ್ ರಾಜ್ಯಕ್ಕೆ ಸಾಗಣಿಕೆ ಮಾಡುತ್ತಾರೆ. ಇದರಿಂದ ವರ್ಷಕ್ಕೆ ರೂ.2.00





ಇತರೇ ಕಸಬುಗಳಾದ ಕೋಳಿ ಸಾಕಣಿಕೆ, ಕುರಿ ಸಾಕಣಿಕೆ, ಹೈನುಗಾರಿಕೆ ಮೂಲಕ ಸಹ ಅವರು ಆದಾಯ ಪಡೆಯುತ್ತಿದ್ದಾರೆ. ಇವರ ಕ್ಷೇತ್ರಕ್ಕೆ ಬೇರೆ ಜಿಲ್ಲೆ ಮತ್ತು ರಾಜ್ಯಗಳಿಂದ ರೈತರು ಭೇಟಿ ನೀಡಿ ಸಲಹೆಯನ್ನು ಪಡೆದು ತಾವುಗಳು ಸಹ ಅವರಂತೆ ಕೃಷಿ ಅಳವಡಿಕೊಳ್ಳಲು ಪ್ರೇರಿತರಾಗಿದ್ದಾರೆ ಅಲ್ಲದೇ ಕೃಷಿ ವಿಶ್ವ ವಿದ್ಯಾಲಯದ ತಜ್ಞರು, ವಿದ್ಯಾರ್ಥಿಗಳು ಹಾಗೂ ಸಂಘ, ಸಂಸ್ಥೆಯವರು, ಪ್ರಗತಿ ಪರ ರೈತರು, ಜಿಲ್ಲಾ ಮಟ್ಟದ ಅಧಿಕಾರಿಗಳು ಕೃಷಿ, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿರುತ್ತಾರೆ. ಅವರಿಂದ ವಿದ್ಯಾರ್ಥಿಗಳು, ರೈತರು ತರಬೇತಿಯನ್ನು ಸಹ ಪಡೆದಿರುತ್ತಾರೆ. ಅವರ ಕೃಷಿ ಕ್ಷೇತ್ರ ಯಶಸ್ವಿಯನ್ನು ಗುರಿತಿಸಿ ಸಂಘ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯ, ಇಕ್ರೀಸ್ಯಾಟ್ ಸಂಸ್ಥೆ ಹಾಗೂ ಧಾರ್ಮಿಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.



ಶ್ರೀಮತಿ ಕವಿತಾ ಉಮಾಶಂಕರ್ ಮಿಶ್ರಾ ಅವರಿಗೆ
ಕೇಂದ್ರ ಕೃಷಿ ಸಚಿವ ರಾಧಾ ಮೋಹನರವರು ರಾಷ್ಟ್ರ ಉದಯೋನ್ಮುಖಿ
ಕೃಷಿ ಮಹಿಳೆ ಪ್ರಶಸ್ತಿ ನೀಡಿ ಸನ್ಮಾನಿಸಿದರು



ಗೋಲ್ಡ್ ಅವಾರ್ಡ್ ಇಕ್ರಿಸ್ಯಾಟ್ ಹೈದರಾಬಾದ್



